**ಅಸಲು ದಾವೆ ಸಂಖ್ಯೆ: 10/2021**
**ಪಿ.ಡಬ್ಲೂ: 1**

**<u>ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ, ಅರಕಲಗೂಡು.</u>**

**<u>ದಿನಾಂಕ:</u> 24.02.2025**ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲು: ಪ್ರತಿವಾದಿಯರ ಪರ ವಕೀಲರು ಶ್ರೀ. ಜಿ.ಡಿ.ಎಂ ರವರಿಂದ.</u>**

ನಾನು ವ್ಯವಸಾಯ ಮಾಡುತ್ತೇನೆ ಮತ್ತು ಬರಹಗಾರ. 2011-12 ರಿಂದ ನಾನು ಪತ್ರ ಬರಹಗಾರನಾಗಿರುತ್ತೇನೆ. ನನಗೆ ಸುಮಾರು ಎರಡು ಎಕರೆ ಜಮೀನು ಇರುತ್ತದೆ. ಅದಕ್ಕೆ ಸಂಬಂದಪಟ್ಟಂತೆ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನದು ರುದ್ರಪಟ್ಟಣ ಗ್ರಾಮ. 1ನೇ ಪ್ರತಿವಾದಿಯು ರುದ್ರಪಟ್ಟಣ ಗ್ರಾಮದವರು. 1ನೇ ಪ್ರತಿವಾದಿ ಎಷ್ಟನೇ ಸರ್ವೆ ನಂಬರ್ ನ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ನಾನು ಸರ್ವೆ ನಂ 73/8 ರಲ್ಲಿ ಉಳುಮೆ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಗೆ ಒಟ್ಟು 3 ಜನ ಅಣ್ಣತಮ್ಮಂದಿರು. ಸಿದ್ದಯ್ಯ ಎಂಬುವರು 1ನೇ ಪ್ರತಿವಾದಿಗೆ ದೊಡ್ಡಪ್ಪ ಚಿಕ್ಕಪ್ಪನ ಮಕ್ಕಳು. 1ನೇ ಪ್ರತಿವಾದಿಯು ಉಳುಮೆ ಮಾಡಿಕೊಂಡು ಬರುತ್ತಿರುವ ಜಾಗವು ಅವರ ತಂದೆ ಲಕ್ಕಯ್ಯರವರಿಗೆ ಕ್ರಯಕ್ಕೆ ಪಡೆದ ಜಾಗ. ಸಾಕ್ಷಿ ಮುಂದುವರೆದು ಆದರೆ ಆ ಜಾಗವನ್ನು 1ನೇ ಪ್ರತಿವಾದಿ ಉಳುಮೆ ಮಾಡುತ್ತಿರುವುದಿಲ್ಲ ನಾನು ಉಳುಮೆ ಮಾಡುತ್ತಿರುತ್ತೇನೆ ಎಂದು ನುಡಿಯುತ್ತಾರೆ. ಲಕ್ಕಯ್ಯ ರವರು ಖರೀದಿ ಮಾಡಿದ ಕ್ರಯಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಲಕ್ಕಯ್ಯನ ಮಗನ ಹೆಸರು ಆರ್.ಎಲ್.ಸಿದ್ದಯ್ಯ. ಸದರಿ ಆರ್.ಎಲ್.ಸಿದ್ದಯ್ಯ ರವರು ನಿವೃತ್ತ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿದ್ದು ಈಗ ಮೈಸೂರಿನಲ್ಲಿ ವಾಸವಿರುತ್ತಾರೆ. ಆರ್.ಎಲ್.ಸಿದ್ದಯ್ಯ ರವರು ಸರ್ಕಾರಿ ಕೆಲಸದಲ್ಲಿ ಇದ್ದ ಕಾರಣ ಅವರು ದಾವಾ ಸ್ವತ್ತಿನ ಸ್ವಾದೀನದಲ್ಲಿ ಇರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆದರೆ ಆರ್.ಎಲ್. ಸಿದ್ದಯ್ಯರವರೇ ಉಳುಮೆಯನ್ನು ಬೇರೆಯವರ ಮುಖಾಂತರ ಮಾಡಿಸುತ್ತಿದ್ದರು ಎಂದು ನುಡಿಯುತ್ತಾರೆ. ಯಾರ ಮುಖಾಂತರ ಉಳುಮೆಯನ್ನು ಮಾಡಿಸುತ್ತಿದ್ದರು ಎಂದರೆ ಸಾಕ್ಷಿಯು ಎಂದರೆ ಸಾಕ್ಷಿಯು ಬೇರೆಯವರ ಮುಖಾಂತರ ಮಾಡಿಸುತಿದ್ದರು ಎಂದು ನುಡಿಯುತ್ತಾರೆ ಆದರೆ ಅವರ ಹೆಸರು ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಜವರಯ್ಯ, ಸಿದ್ದಯ್ಯ, ಲಕ್ಕಯ್ಯರವರು ಒಂದೇ ಕುಟುಂಬಕ್ಕೆ ಸೇರಿದವರು ಎಂದರೆ

**ಅಸಲು ದಾವೆ ಸಂಖ್ಯೆ: 10/2021**
**ಪಿ.ಡಬ್ಲೂ: 1**

ಸಾಕ್ಷಿಯು ಈ ಮುಂಚೆ ಒಂದೇ ಕುಟುಂಬಕ್ಕೆ ಸೇರಿದವರು ಎಂದು ನುಡಿಯುತ್ತಾರೆ. ಜವರಯ್ಯ, ಸಿದ್ದಯ್ಯ, ಲಕ್ಕಯ್ಯರವರು ಒಂದೇ ಕುಟುಂಬಕ್ಕೆ ಸೇರಿದವರಾಗಿರುವುದರಿಂದ ದಾವಾ ಸ್ವತ್ತು ಅವರ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಸುಮಾರು 30-40 ವರ್ಷಗಳಿಂದ 1ನೇ ಪ್ರತಿವಾದಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಮೌಖಿಕವಾಗಿ ಸಿದ್ದಯ್ಯ ಎಂಬುವರು 1ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನು ಸ್ವಾಧೀನ ಇದ್ದೇನೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರು ಪಡಿಸಿರುತ್ತೇನೆ. ನಾನು ದಾವಾ ಸ್ವತ್ತಿನಲ್ಲಿ ಸ್ವಾದೀನ ಇರುತ್ತೇನೆ ಎಂದು ಪ್ರತ್ಯೇಕ ಸಾಕ್ಷಿಯನ್ನು ಕೊಡಿಸಬಹುದು.

ನಾನು ಪತ್ರ ಬರಹಗಾರನಾಗಿರುವುದರಿಂದ ನನಗೆ ತಾಲ್ಲೂಕು ಕಚೇರಿಯ ಎಲ್ಲಾ ವ್ಯವಹಾರಗಳು ತಿಳಿದಿರುತ್ತದೆ ಎಂದರೆ ಸಾಕ್ಷಿಯು ನನಗೆ ಸ್ವಲ್ಪ ವ್ಯವಹಾರಗಳು ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ಪತ್ರ ಬರಹನಾಗಿರುವುದರಿಂದ ನೀವು ಪರವಾನಗಿಯನ್ನು ಪಡೆದಿರುತ್ತೀರಾ ಎಂದರೆ ಸಾಕ್ಷಿಯು ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಪರವಾನಗಿಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಪ್ರತಿವಾದಿ ಪರ ವಕೀಲರು ಪ್ರಶ್ನಿಸಿದ್ದು ಸದರಿ ಪ್ರಶ್ನೆಯು ಸೂಕ್ತ ಪ್ರಶ್ನೆಯಲ್ಲದ ಕಾರಣ ತಿರಸ್ಕರಿಸಲಾಯಿತು. ದಾವಾ ಸ್ವತ್ತನ್ನು ಖರೀದಿಸುವ ಮುಂಚಿತವಾಗಿ ನಾನು ಪ್ರತಿವಾದಿಯರ ಸಂಬಂಧಿಕರಿಗೆ ಈ ವಿಚಾರದ ಬಗ್ಗೆ ಹೇಳಿರುವುದಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿಯರ ಪರ ವಕೀಲರು ಕಾಲಾವಕಾಶ ಕೋರಿದ್ದು, ನೀಡಲಾಯಿತು)

(ಸಾಕ್ಷಿಯ ಹೇಳಿಕೆ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿಯಿದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,**
**ಅರಕಲಗೂಡು.**